# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570006

**ದಿನಾಂಕ: 30.01.2024** ರಂದು **ಪೂರ್ವಾಹ್ನ 11.30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಭವನ ಕಟ್ಟಡದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ **176ನೇ** ಸಾಮಾನ್ಯ ಸಭೆಯ ನಡಾವಳಿ.

| | |
|---|---|
| **ಉಪಸ್ಥಿತರು** | |
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು. | **ಪ್ರೊ ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ಲಕ್ಷ್ಮಿ .ಎನ್**<br>ಡೀನ್(ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು. | **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ |
| **ಶ್ರೀ. ಡಿ. ರವಿಶಂಕರ್**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.139/1, ಕೆಸ್ತೂರು ಕೊಪ್ಪಲು ಗ್ರಾಮ,<br>ಕೆಸ್ತೂರು ಅಂಚೆ, ಕೃಷ್ಣರಾಜನಗರ ತಾಲ್ಲೂಕು,<br>ಮೈಸೂರು ಜಿಲ್ಲೆ. | **ಶ್ರೀ. ಕೆ. ಹರೀಶ್ ಗೌಡ**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.1, ಸಿ.ಹೆಚ್.35, ಕಾಂತರಾಜು ಅರಸ್ ರಸ್ತೆ,<br>ಕೆ.ಜಿ.ಕೊಪ್ಪಲು, ಮೈಸೂರು – 570009 |
| | |
| **ಅನುಪಸ್ಥಿತರು** | |
| **ಶ್ರೀ. ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಳಿ, ನೆಹರು ಗೂಂಜ್,<br>ಕಲಬುರಗಿ – 585104 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 | |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಮಾನ್ಯ ಕುಲಪತಿಗಳು ಮಾತನಾಡಿ, ವಿಷಯಸೂಚಿ ಪ್ರಕಾರ 176ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಲು ಕುಲಸಚಿವರಿಗೆ ಸೂಚಿಸಿದರು. ನಂತರ, ಕುಲಸಚಿವರು 176ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಿದರು.

**ಕುಲಪತಿಗಳು** | **ಕುಲಸಚಿವರು**

**ವಿಷಯ ಸಂಖ್ಯೆ: 176.01 (ಅ)**

**ವಿಷಯ: ದಿನಾಂಕ: 01.12.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 175ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ.**

– * –

**ತೀರ್ಮಾನ:**

**ದಿನಾಂಕ: 01.12.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 175ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸಲಾಯಿತು.**

*****

**ವಿಷಯ ಸಂಖ್ಯೆ: 176.01 (ಆ)**

**ವಿಷಯ: ದಿನಾಂಕ: 01.12.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 175ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿ ಬಗ್ಗೆ.**

– * –

**ತೀರ್ಮಾನ:**

**ದಿನಾಂಕ: 01.12.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 175ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 176.02**

**ವಿಷಯ: 2023ರ ಜನವರಿ ಆವೃತ್ತಿಯಲ್ಲಿ 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸಿದ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರೋತ್ಸಾಹ ಧನವನ್ನು ನೀಡುತ್ತಿರುವ ಬಗೆಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸುವ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ವಿದ್ಯಾರ್ಥಿಗಳ ಬೋಧನಾ ಶುಲ್ಕದಲ್ಲಿ ಶೇ.20% ರಷ್ಟು ಪ್ರೋತ್ಸಾಹ ಧನವನ್ನು ನೀಡಲು ಈಗಾಗಲೇ ದಿನಾಂಕ: 18–03–2023ರಂದು ನಡೆದ 171ನೇ ವ್ಯವಸ್ಥಾಪನಾ ಮಂಡಳಿಯಲ್ಲಿ ತೀರ್ಮಾನಿಸಲಾಗಿತ್ತು. ಈ ಹಿನ್ನೆಲೆಯಲ್ಲಿ 2022–23ರ ಜನವರಿ ಆವೃತ್ತಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ 50 ಅಥವಾ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ಪ್ರಕ್ರಿಯೆಯನ್ನು ಒಟ್ಟು 3747 ವಿದ್ಯಾರ್ಥಿಗಳಿಗೆ ಪೂರ್ಣಗೊಳಿಸಿದ 29 ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರೋತ್ಸಾಹ ಧನವಾಗಿ ಒಟ್ಟು ರೂ.59,65,876.20 (ಐವತ್ತೊಂಬತ್ತು ಲಕ್ಷದ ಅರವತ್ತೈದು ಸಾವಿರದ ಎಂಟುನೂರ ಎಪ್ಪತ್ತಾರು ರೂಪಾಯಿಗಳು ಇಪ್ಪತ್ತು ಪೈಸೆ)ಗಳನ್ನು ನೀಡಲು ಮಾನ್ಯ ಕುಲಪತಿಗಳು ದಿನಾಂಕ 01–01–2024 ರಂದು ಅನುಮೋದನೆ ನೀಡಿರುತ್ತಾರೆ. ಅವುಗಳಲ್ಲಿ ಒಟ್ಟು 2861 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ಪೂರ್ಣಗೊಳಿಸಿದ

ಕುಲಪತಿಗಳು ಕುಲಸಚಿವರು

ಒಟ್ಟು 24 ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರೋತ್ಸಾಹ ಧನವಾಗಿ ಒಟ್ಟು ರೂ.45,40,323.80 (ನಲವತ್ತೈದು ಲಕ್ಷದ ನಲವತ್ತು ಸಾವಿರದ ಮುನ್ನೂರ ಇಪ್ಪತ್ಮೂರು ರೂಪಾಯಿಗಳು ಎಂಬತ್ತು ಪೈಸೆ)ಗಳನ್ನು ಪ್ರೋತ್ಸಾಹ ಧನವಾಗಿ ನೀಡಲು ಈಗಾಗಲೇ ಕ್ರಮವಹಿಸಲಾಗಿರುತ್ತದೆ. ಈ ಸಂಬಂಧವಾಗಿ ವ್ಯವಸ್ಥಾಪನಾ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಮಾನ್ಯ ಕುಲಪತಿಗಳು ಮಾತನಾಡಿ ಒಂದೊಂದು ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸುವ ಕಲಿಕಾರ್ಥಿ ಸಹಾಯ ಕೇಂದ್ರದ ವಿದ್ಯಾರ್ಥಿಗಳ ಬೋಧನಾ ಶುಲ್ಕದಲ್ಲಿ ಶೇ.20ರಷ್ಟು ಪ್ರೋತ್ಸಾಹ ಧನವನ್ನು ನೀಡುತ್ತಿದ್ದು, ಸದರಿ ಕಲಿಕಾರ್ಥಿ ಸಹಾಯ ಕೇಂದ್ರದಲ್ಲಿ 50 ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ಪ್ರವೇಶಾತಿ ಮಾಡಿಕೊಂಡಿದ್ದಲ್ಲಿ ಅಂತಹ ಸಂದರ್ಭದಲ್ಲಿ ಶೇ.20ರಷ್ಟು ಪ್ರೋತ್ಸಾಹ ಧನವನ್ನು ನೀಡಬೇಕೆಂದು ಚಿಂತಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ಇದೊಂದು ಒಳ್ಳೆಯ ಅಭಿಪ್ರಾಯವೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಒಟ್ಟು 2861 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ಪೂರ್ಣಗೊಳಿಸಿದ ಒಟ್ಟು 24 ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರೋತ್ಸಾಹ ಧನವಾಗಿ ಒಟ್ಟು ರೂ.45,40,323.80 (ನಲವತ್ತೈದು ಲಕ್ಷದ ನಲವತ್ತು ಸಾವಿರದ ಮುನ್ನೂ ್ನರ ಇಪ್ಪತ್ಮೂರು ರೂಪಾಯಿಗಳು ಎಂಬತ್ತು ಪೈಸೆ)ಗಳನ್ನು ಪ್ರೋತ್ಸಾಹ ಧನವಾಗಿ ನೀಡಲು ಈಗಾಗಲೇ ಕ್ರಮವಹಿಸಲಾಗಿರುವ ಹಿನ್ನಲೆಯಲ್ಲಿ ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 176.03**

**ವಿಷಯ: ಶ್ರೀ.ಟಿ.ಬಿ.ಜಯಚಂದ್ರ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ, ನವದೆಹಲಿ. ಇವರ ಪತ್ರದನ್ವಯ ತುಮಕೂರಿನ ಶಿರಾದಲ್ಲಿ ಪ್ರಾದೇಶಿಕ ಕೇಂದ್ರ ಸ್ಥಾಪಿಸುವ ಬಗೆಗೆ.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ" ಎಂಬ ಧ್ಯೇಯ ವಾಕ್ಯದಂತೆ ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ ಹಾಗು ಬಡ ಮಕ್ಕಳಿಗೆ ದೂರ ಶಿಕ್ಷಣದ ಮೂಲಕ ಉನ್ನತ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ನೀಡುವ ಸದುದ್ದೇಶದಿಂದ ಈಗಾಗಲೇ 35 ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಶ್ರೀ. ಟಿ.ಬಿ.ಜಯಚಂದ್ರ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ, ನವದೆಹಲಿ, ಇವರು ಪತ್ರ ಮುಖೇನ ಶಿರಾ ತಾಲ್ಲೂಕು ಡಾ॥ ಡಿ.ನಂಜುಂಡಪ್ಪ ರವರ ವರದಿಯ ಪ್ರಕಾರ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾಗಿರುತ್ತದೆ. ಪ್ರಸ್ತುತ ಸುತ್ತ–ಮುತ್ತಲಿನ ಹಿರಿಯೂರು, ಪಾವಗಡ, ಮಧುಗಿರಿ, ಚಿಕ್ಕನಾಯಕನಹಳ್ಳಿ ಮತ್ತು ಚಳ್ಳಕೆರೆ ತಾಲ್ಲೂಕುಗಳ ಸಾರ್ವಜನಿಕರಿಗೆ / ವಿದ್ಯಾರ್ಥಿಗಳಿಗೆ ಶಿರಾ ಶೈಕ್ಷಣಿಕ ಕೇಂದ್ರವಾಗಿದೆ. ಆದುದರಿಂದ ಶಿರಾ ತಾಲ್ಲೂಕಿನಲ್ಲಿ ಪ್ರಾದೇಶಿಕ ಕೇಂದ್ರ ಪ್ರಾರಂಭಿಸಿದ್ದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ ಎಂದು

ಕುಲಪತಿಗಳು ಕುಲಸಚಿವರು

ತಿಳಿಸಿರುತ್ತಾರೆ ಹಾಗು ಸದರಿ ಪ್ರಾದೇಶಿಕ ಕೇಂದ್ರ ಸ್ಥಾಪಿಸಲು ಅಗತ್ಯವಾದ ಜಮೀನನ್ನು ಗುರುತಿಸಲು ಈಗಾಗಲೇ ಕ್ರಮವಹಿಸಲಾಗಿದೆ ಎಂದು ಸದರಿಯವರು ಪತ್ರದಲ್ಲಿ ತಿಳಿಸಿರುತ್ತಾರೆ. ಈ ಸಂಬಂಧವಾಗಿ ಶಿರಾ ತಾಲ್ಲೂಕಿನಲ್ಲಿ ಕ.ರಾ.ಮು.ವಿ.ಯ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸುವ ಸಂಬಂಧ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ ಶ್ರೀ. ಟಿ.ಬಿ.ಜಯಚಂದ್ರ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ, ನವದೆಹಲಿ. ರವರು ಶಿರಾ ತಾಲ್ಲೂಕಿನಲ್ಲಿ ಪ್ರಾದೇಶಿಕ ಕೇಂದ್ರ ಸ್ಥಾಪಿಸಲು 3 ಎಕರೆ ಜಾಗವನ್ನು ಉಚಿತವಾಗಿ ನೀಡಲು ಮುಂದಾಗಿದ್ದು, ಈ ಸ್ಥಳದಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ತೆರೆಯುವುದರಿಂದ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಹಾಯಕವಾಗುತ್ತದೆಂದು ಸಭೆಗೆ ವಿವರಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ. ಟಿ.ಬಿ.ಜಯಚಂದ್ರ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ, ನವದೆಹಲಿ. ರವರು ಶಿರಾ ತಾಲ್ಲೂಕಿನಲ್ಲಿ ಪ್ರಾದೇಶಿಕ ಕೇಂದ್ರ ಸ್ಥಾಪಿಸಲು 3 ಎಕರೆ ಜಾಗವನ್ನು ಉಚಿತವಾಗಿ ನೀಡಿದ ನಂತರ ಆ ಸ್ಥಳದಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಸ್ಥಾಪಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**<u>ವಿಷಯ ಸಂಖ್ಯೆ: 176.04</u>**

**<u>ವಿಷಯ:</u> ವ್ಯವಸ್ಥಾಪನಾ ಮಂಡಳಿ ವಿಷಯ ಸಂಖ್ಯೆ: 175.07 ಕುಮಾರಿ ದೀಕ್ಷಾ ಎಸ್. D/o ಲೇಟ್ ಶಿವಣ್ಣ ಎನ್. ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ವಿಷಯದ ತೀರ್ಮಾನದ ಬಗೆಗೆ.**

– * –

ಕುಮಾರಿ ದೀಕ್ಷಾ ಎಸ್. D/o ಲೇಟ್ ಶಿವಣ್ಣ ಎನ್. ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ವಿಷಯವನ್ನು 175ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲಾಗಿದ್ದು, ಸಭೆಯ ತೀರ್ಮಾನ "ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕುಮಾರಿ ದೀಕ್ಷಾ ಎಸ್. D/o ಲೇಟ್ ಶಿವಣ್ಣ ಎನ್. ಇವರಿಗೆ ತಂದೆಯವರ ಮರಣದ ಹಿನ್ನಲೆಯಲ್ಲಿ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ನೇಮಕಾತಿ ಮಾಡಲು ಸಭೆಯು ತೀರ್ಮಾನಿಸಲಾಯಿತು."

ಸದರಿ ತೀರ್ಮಾನಕ್ಕೆ ಸಂಬಂಧಿಸಿದಂತೆ, ಮಾನ್ಯ ಶ್ರೀ. ರವಿಶಂಕರ್ .ಡಿ ಶಾಸಕರು, ಕೃಷ್ಣರಾಜ ನಗರ ವಿಧಾನಸಭಾ ಕ್ಷೇತ್ರ, ಮೈಸೂರು ಜಿಲ್ಲೆ, ಮೈಸೂರು ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು ಸದರಿಯವರು ಬಿ.ಎಸ್ಸಿ., ಪದವೀಧರರಾಗಿದ್ದು, ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಅರ್ಹರಾಗಿರುತ್ತಾರೆ. ಆದರೆ ಸದರಿ ಸಭೆಯ

ಕುಲಪತಿಗಳು ಕುಲಸಚಿವರು

ತೀರ್ಮಾನದಲ್ಲಿ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ನೇಮಕಾತಿ ಮಾಡಲು ತೀರ್ಮಾನಿಸಿರುವುದಕ್ಕೆ ದಿನಾಂಕ: 20.12.2023ರ ಪತ್ರದ ಮುಖೇನ ನಿರಾಕರಣೆ ವ್ಯಕ್ತಪಡಿಸಲಾಗಿದ್ದು, ಕುಮಾರಿ ದೀಕ್ಷಾ ಎಸ್. D/o ಲೇಟ್ ಶಿವಣ್ಣ ಎನ್. ಇವರಿಗೆ ನಿಯಮದಡಿ ಪ್ರಥಮ ದರ್ಜೆ ಗುಮಾಸ್ತೆ ಹುದ್ದೆಗೆ ಪರಿಗಣಿಸುವಂತೆ ತೀರ್ಮಾನಿಸಲು ಸಮ್ಮತಿಸುತ್ತಾ, ಪರಿಷ್ಕರಿಸಲು ಮಾನ್ಯ ಕುಲಪತಿಗಳನ್ನು ಕೋರಿರುತ್ತಾರೆ. ಸದರಿ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದೀಕ್ಷಾ ಎಸ್. D/o ಲೇಟ್ ಶಿವಣ್ಣ ಎನ್. ಇವರು ಬಿ.ಎಸ್ಸಿ., ಪದವೀಧರರಾಗಿರುತ್ತಾರೆ. ಇವರಿಗೆ ಅನುಕಂಪದ ಆಧಾರದ ಮೇಲೆ ಪ್ರಥಮ ದರ್ಜೆ ಗುಮಾಸ್ತ ಹುದ್ದೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**<u>ವಿಷಯ ಸಂಖ್ಯೆ: 176.05</u>**

<u>ವಿಷಯ:</u> **2023–24ನೇ ಸಾಲಿನ ಜುಲೈ ಹಾಗೂ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದ ಪ್ರಥಮ ಬಿ.ಎ / ಬಿ.ಕಾಂ., ವಿದ್ಯಾರ್ಥಿಗಳಿಗೆ ವಿತರಿಸಲು ಕೊರತೆಯಾಗಿರುವ ಅಧ್ಯಯನ ಸಾಮಗ್ರಿಗಳ ಮುದ್ರಣದ ಬಗ್ಗೆ.**

– * –

2023–24ನೇ ಸಾಲಿನ ಜುಲೈ ಆವೃತ್ತಿಯಲ್ಲಿ **ಪ್ರಥಮ ಬಿ.ಎ/ಬಿ.ಕಾಂ.,** ಪ್ರವೇಶಾತಿ ಪಡೆದಿರುವ ಕೆಲವು ವಿದ್ಯಾರ್ಥಿಗಳಿಗೆ ಹಾಗೂ 2024ನೇ ಸಾಲಿನ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಗಳನ್ನು ಮಾರ್ಚ್ ಅಂತ್ಯದೊಳಗೆ ವಿತರಿಸಬೇಕಾಗಿರುತ್ತದೆ. ಪ್ರಸ್ತುತ ದಾಸ್ತಾನಿನಲ್ಲಿ ಕೊರತೆಯಾಗಿರುವ **ಪ್ರಥಮ ಬಿ.ಎ/ಬಿ.ಕಾಂ.,** ಅಧ್ಯಯನ ಸಾಮಗ್ರಿಗಳ ವಿವರಗಳನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕರು ನೀಡಿರುತ್ತಾರೆ. ಅದರಂತೆ, **ಪ್ರಥಮ ಬಿ.ಎ/ಬಿ.ಕಾಂ.,** ಅಧ್ಯಯನ ಸಾಮಗ್ರಿಗಳನ್ನು ತುರ್ತಾಗಿ ಮುದ್ರಿಸಿಕೊಳ್ಳಬೇಕಾಗಿದ್ದು, ಕೊರತೆಯಾಗಿರುವ ಅಧ್ಯಯನ ಸಾಮಗ್ರಿಗಳ ವಿವರ ಹಾಗೂ ವೆಚ್ಚವನ್ನು **ಅನುಬಂಧ 'ಅ'** ನಲ್ಲಿ ತೋರಿಸಲಾಗಿದೆ. ಸದರಿ ಅಧ್ಯಯನ ಸಾಮಗ್ರಿಗಳ ಮುದ್ರಣದ ವೆಚ್ಚ ಪ್ರಸ್ತುತ ಚಾಲ್ತಿಯಲ್ಲಿರುವ ಇಂಜಿನಿಯರಿಂಗ್ ವಿಭಾಗದಿಂದ ಆಹ್ವಾನಿಸಲಾಗಿರುವ ಟೆಂಡರ್ ದರಗಳನ್ವಯ ಲೆಕ್ಕ ಹಾಕಿ ರೂ. **1,90,91,551=44** ಗಳಾಗಬಹುದೆಂದು ಅಂದಾಜಿಸಲಾಗಿದ್ದು, ಒಟ್ಟು ರೂ.**2.00 ಕೋಟಿಗಳನ್ನು** ನಿಗದಿಪಡಿಸಿ, ಸದರಿ ಅಧ್ಯಯನ ಸಾಮಗ್ರಿಗಳ ಮುದ್ರಣ ಸಂಬಂಧದ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ.

*****

ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸದಸ್ಯರಾದ ಶ್ರೀ. ರವಿಶಂಕರ್ .ಡಿ ರವರು ಮಾತನಾಡಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಮುನ್ನ ಸಿದ್ಧಪಾಠಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳಬೇಕು ಎಂದು ಸಭೆಗೆ ತಿಳಿಸಿದರು.

**ಕುಲಪತಿಗಳು** **ಕುಲಸಚಿವರು**

ಈ ವಿಷಯದ ಬಗ್ಗೆ ಕುಲಸಚಿವರು ಮಾತನಾಡಿ 2022–23ನೇ ಸಾಲಿನ ಜುಲೈ ಮತ್ತು ಜನವರಿ ಆವೃತ್ತಿಯಲ್ಲಿ **ಪ್ರಥಮ ಬಿ.ಎ/ಬಿ.ಕಾಂ.,** ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶೇ. 10 ರಷ್ಟು ಹೆಚ್ಚು ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಕ್ರಮವಹಿಸಲಾಗುತ್ತಿತ್ತು. ನಂತರದ ಸಾಲಿನಲ್ಲಿ ಪ್ರವೇಶಾತಿ ಸಂಖ್ಯೆಯ ಪ್ರಮಾಣವು ಹೆಚ್ಚಾಗುತ್ತಿದ್ದು, ಅವುಗಳ ಅನುಸಾರ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಬೇಕಾಗಿರುವುದರಿಂದ ಈ ಮೇಲ್ಕಂಡ ಕ್ರಮಗಳನ್ನು ನಿರ್ವಹಿಸಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

<u>ತೀರ್ಮಾನ</u>:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಷಯದ ಅನುಬಂಧ 'ಅ' ನಲ್ಲಿ ತೋರಿಸಲಾದ ಅಧ್ಯಯನ ಸಾಮಗ್ರಿಗಳ ಮುದ್ರಣ ವೆಚ್ಚ, ಪ್ರಸ್ತುತ ಚಾಲ್ತಿಯಲ್ಲಿರುವ ಟೆಂಡರ್ ದರಗಳನ್ವಯ ಒಟ್ಟು ರೂ. 2.00 ಕೋಟಿಗಳನ್ನು ನಿಗದಿಪಡಿಸಿದ್ದು, ಸದರಿ ಅಧ್ಯಯನ ಸಾಮಗ್ರಿಗಳ ಮುದ್ರಣ ಸಂಬಂಧ ವಿಷಯವನ್ನು ಸಭೆಯಲ್ಲಿ ಅನುಮೋದಿಸಲಾಯಿತು.**

#####

**<u>ವಿಷಯ ಸಂಖ್ಯೆ: 176.06</u>**

**ವಿಷಯ: ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿ ಹಾಗೂ ಪ್ರಾದೇಶಿಕ ಕೇಂದ್ರಗಳಿಗೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸಿದ ಮೆ. ಶ್ರೀ ರಂಗನಾಥ ಎಂಟರ್ ಪ್ರೈಸಸ್, ಮೈಸೂರು, ಇವರ ಪರಿಷ್ಕೃತ ವೇತನವನ್ನು ಬಿಡುಗಡೆ ಮಾಡಿರುವ ಸಂಬಂಧ ಅನುಸಮರ್ಥನೆಗಾಗಿ.**

– * –

ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಭದ್ರತಾ ಸಿಬ್ಬಂದಿ ಸೇವೆ ಪಡೆಯುವ ಸಂಬಂಧ ದಿನಾಂಕ:10.04.2017 ರಿಂದ 19.04.2022ರವರೆಗೆ ಭದ್ರತಾ ಸಿಬ್ಬಂದಿಗಳು ಕಾರ್ಯ ನಿರ್ವಹಿಸಿರುವ ಸಂಬಂಧ ಹಳೆ ವೇತನ ಮಾತ್ರ ಪಾವತಿಸಿದ್ದು, ಪ್ರತಿ ವರ್ಷ ಕಾಲ–ಕಾಲಕ್ಕೆ ಬದಲಾಗಿರುವ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಿಂದ ಪರಿಷ್ಕೃತಗೊಂಡಿರುವ ವೇತನ ವ್ಯತ್ಯಾಸದ ಭತ್ಯೆಯನ್ನು (Basic VDA, PF, ESI, Washing allowance, National Holidays, Leave with wages, Weekly off) ಒಟ್ಟು ಮೊತ್ತ ರೂ. 96,81,335/-(ತೊಂಬತ್ತಾರು ಲಕ್ಷದ ಎಂಬತ್ತೊಂದು ಸಾವಿರದ ಮೂರು ನೂರ ಮುವತ್ತೈದು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ಕೋರಿರುತ್ತಾರೆ.

ಮುಂದುವರೆದು, ಕರ್ನಾಟಕ ಸರ್ಕಾರದ ಹಿರಿಯ ಕಾರ್ಮಿಕ ನಿರೀಕ್ಷಕರ ಕಛೇರಿಯಿಂದ ಎರಡು ಬಾರಿ ನೋಟಿಸ್‌ನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ: CLR/CR-49/2010-11 Date: 11.03.2013ರ ಪ್ರಕಾರ ಹೊರಗುತ್ತಿಗೆ ಸಿಬ್ಬಂದಿಗಳಿಗೆ (Basic VDA, PF, ESI, Washing allowance, National Holidays, Leave with wages,

**ಕುಲಪತಿಗಳು** **ಕುಲಸಚಿವರು**

Weekly off), ಸಹ ಪಾವತಿಸಬೇಕೆಂದು ಆದೇಶಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಭದ್ರತಾ ಸಿಬ್ಬಂದಿಗಳನ್ನು ಒದಗಿಸಿದ ಮೆ. ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು. ಇವರಿಗೆ ದಿನಾಂಕ: 10.04.2017 ರಿಂದ 12.08.2020ರವರೆಗೆ ಪರಿಷ್ಕೃತ ವೇತನದ ವ್ಯತ್ಯಾಸದ ಭತ್ಯೆಯನ್ನು ಪಾವತಿಸಲು ಆದೇಶಿಸಿರುತ್ತಾರೆ.

ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಟಿಪ್ಪಣಿಯಲ್ಲಿ ಸದರಿ ಸಂಸ್ಥೆಯವರೆಗೆ ಏಪ್ರಿಲ್–2017 ರಿಂದ ಆಗಸ್ಟ್–2020ರವರೆಗೆ ವೇತನ ಪಾವತಿಸಿರುವ ಬಗ್ಗೆ ಮಾಹಿತಿ ನೀಡಿದ್ದು, ಮೆ. ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರು ದಿನಾಂಕ: 10.04.2017 ರಿಂದ 12.08.2020 ರವರೆಗೆ ಈಗಾಗಲೇ ಪಾವತಿಸಿರುವ ಹುಂಡಿಯನ್ನು ಪರಿಶೀಲಿಸಿ, ಹಾಗೂ ತಾಳೆ ಮಾಡಿ ಕಾರ್ಮಿಕ ಇಲಾಖೆಯವರು ಕಾಲ–ಕಾಲಕ್ಕೆ ಬದಲಾಗುವ ವೇತನವನ್ನು ವಿಶ್ವವಿದ್ಯಾನಿಲಯವು ಪಾವತಿಸಿರುವುದಿಲ್ಲ, ಆ ಸಂದರ್ಭದಲ್ಲಿಯೇ ವಿಶ್ವವಿದ್ಯಾನಿಲಯವು ಕ್ರಮವಹಿಸುತ್ತಿತ್ತು.

ಈ ಸಂಬಂಧ ಕಾರ್ಮಿಕ ಇಲಾಖೆಯವರು ಈಗಾಗಲೇ ಸದರಿ ಸಂಸ್ಥೆಗೆ ಹಾಗೂ ವಿಶ್ವವಿದ್ಯಾನಿಲಯಕ್ಕೆ ಪರಿಷ್ಕೃತ ವೇತನದ ವ್ಯತ್ಯಾಸದ ಮೊತ್ತ ಪಾವತಿಸಲು 02 ನೋಟಿಸ್ ನೀಡಿ ಕ್ರಮಕೈಗೊಳ್ಳುವಂತೆ ತಿಳಿಸಿರುವುದರಿಂದ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಮೆ.ರಂಗನಾಥ್ ಎಂಟರ್ ಪ್ರೈಸಸ್, ಮೈಸೂರು ಇವರಿಗೆ ಹುಂಡಿಯ ಮೊತ್ತವನ್ನು ಪಾವತಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಗೆ ಪಾವತಿಸಿರುವ ಮೊತ್ತ ರೂ. 96,81,335/-ಗಳನ್ನು ಪಾವತಿಸಿರುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಅನುಸಮರ್ಥನೆಗಾಗಿ ಮಂಡಿಸಿದೆ.

#####

ಮೇಲ್ಕಂಡ ವಿಷಯದ ಬಗ್ಗೆ ಸದಸ್ಯರಾದ ಶ್ರೀ. ಕೆ. ಹರೀಶ್ ಗೌಡ ರವರು ಮಾತನಾಡಿ ಕರಾಮುವಿಯಲ್ಲಿ ಹಾಗೂ ಪ್ರಾದೇಶಿಕ ಕೇಂದ್ರಗಳಿಗೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸಿರುವ ಮೆ. ಶ್ರೀ. ರಂಗನಾಥ ಎಂಟರ್ ಪ್ರೈಸಸ್, ಮೈಸೂರು. ಇವರು ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ನಿಯಮಗಳ ಅನುಸಾರ ಭದ್ರತಾ ಸಿಬ್ಬಂದಿಗಳಿಗೆ **E.S.I., P.F.,** ಸೌಲಭ್ಯಗಳನ್ನು ನೀಡಿರುವುದಿಲ್ಲ. ಈ ಬಗ್ಗೆ ಹಲವಾರು ದೂರುಗಳು ಬಂದಿರುತ್ತದೆ. ದೂರುಗಳ ಅಧಾರದ ಮೇಲೆ ಇವರು ನಿರ್ವಹಣೆ ಮಾಡುತ್ತಿರುವ ಸಂಸ್ಥೆಗಳಲ್ಲಿ ಕರಾಮುವಿ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಇನ್ನಿತರೆ ಸರ್ಕಾರಿ / ಅರೆ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿ ಸೇವೆಯನ್ನು ನೀಡುತ್ತಿದ್ದು, ಭದ್ರತಾ ಸಿಬ್ಬಂದಿಗೆ ಕಾರ್ಮಿಕ ಇಲಾಖೆಯ ನಿಯಮಗಳನ್ವಯ ನೀಡಬೇಕಾಗಿರುವ ಸವಲತ್ತುಗಳನ್ನು ಭದ್ರತಾ ಸಿಬ್ಬಂದಿಗೆ ನೀಡದ ಕಾರಣ ಇಂತಹ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸುವುದು ಸೂಕ್ತವೆಂದು ತಿಳಿಸಿದರು.

ಕುಲಪತಿಗಳು ಕುಲಸಚಿವರು

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಈ ಕೂಡಲೇ ಕಾರ್ಮಿಕ ಇಲಾಖೆಯ ಆಯುಕ್ತರಿಗೆ ಚರ್ಚಿತ ವಿಷಯಗಳ ವಿವರಗಳನ್ನೊಳಗೊಂಡಂತೆ ಪತ್ರ ಬರೆದು ಈ ಬಗ್ಗೆ ಮೆ. ಶ್ರೀ. ರಂಗನಾಥ ಎಂಟರ್ ಪ್ರೈಸಸ್, ಮೈಸೂರು. ಇವರ ಮೇಲೆ ಶಿಸ್ತು ಕ್ರಮ ಕೈಗೊಂಡು ಈ ಫರ್ಮ್ ಅನ್ನು ಕಪ್ಪು ಪಟ್ಟಿಗೆ ಸೇರಿಸುವ ಸಂಬಂಧ ಪತ್ರ ವ್ಯವಹಾರ ಮಾಡಲು ಸಭೆಯಲ್ಲಿ ನಿರ್ಣಯಿಸಿ, ವಿಷಯವನ್ನು ಮುಂದೂಡಲಾಯಿತು.

#####

**ವಿಷಯ ಸಂಖ್ಯೆ: 176.07**

**ವಿಷಯ: ವಿ.ವಿ.ನಿಲಯದಲ್ಲಿ UGC/ICAR/AICTE ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸಿ ದಿನಾಂಕ: 01.04.2012ರ ನಂತರ ನಿವೃತ್ತಿ/ಮರಣ ಹೊಂದಿರುವ ಅಧ್ಯಾಪಕ ವರ್ಗದವರಿಗೆ ಪಿಂಚಣಿ / ಕುಟುಂಬ ಪಿಂಚಣಿಯನ್ನು ಸರ್ಕಾರದ ನಿರ್ದೇಶನದನ್ವಯ ಜಾರಿಗೊಳಿಸುವ ಬಗೆಗೆ.**

– * –

ವಿ.ವಿ. ನಿಲಯದಲ್ಲಿ UGC/ICAR/AICTE ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸಿ ದಿನಾಂಕ: 01.04.2012ರ ನಂತರ ನಿವೃತ್ತಿ/ಮರಣ ಹೊಂದಿರುವ ಅಧ್ಯಾಪಕ ವರ್ಗದವರಿಗೆ ಪಿಂಚಣಿ/ಕುಟುಂಬ ಪಿಂಚಣಿಯನ್ನು ಸರ್ಕಾರ ಹೊರಡಿಸಿರುವ ದಿನಾಂಕ: 11.03.2020 ಮತ್ತು 03.06.2020ರ ಪರಿಷ್ಕೃತ ಆದೇಶವನ್ನು ಯಥಾವತ್ತಾಗಿ ಅಳವಡಿಸಿಕೊಂಡು ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–1/205–A/2020-21, ದಿನಾಂಕ: 29.07.2020ರಂತೆ ಪಿಂಚಣಿಯನ್ನು ನಿಗದಿಪಡಿಸಿ ಪಾವತಿಸಲಾಗಿರುತ್ತದೆ.

ಪರಿಷ್ಕೃತಗೊಂಡಿರುವ ಪಿಂಚಣಿಯ ಮೊತ್ತವು ಹಿಂದಿನ ದರಕ್ಕಿಂತ ಕಡಿಮೆ ಇರುವುದರಿಂದ ನಿವೃತ್ತ ಅಧ್ಯಾಪಕರುಗಳಾದ ಡಾ.ಆರ್.ಸೋಮಪ್ಪ, ಡಾ.ಹೆಚ್.ಎಲ್.ವೆಂಕಟೇಶ್, ಡಾ.ಜಹನಾರಾ ಬೇಗಂ, ಡಾ.ಎಂ.ಸುಶೀಲ ಅರಸ್, ಶ್ರೀ.ವೈ.ಎಜಾಜ್ ಅಹಮದ್, ಡಾ.ಎಲ್.ರಾಜಶೇಖರಯ್ಯ, ಡಾ.ಎಸ್.ಎನ್.ವಿಕ್ರಮ ರಾಜೇ ಅರಸ್ ಮತ್ತು ಡಾ.ನಿರ್ಮಲ ಸಿ.ಪ್ರಕಾಶ್ ಇವರುಗಳು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿರುತ್ತಾರೆ (ದಾವೆ ಸಂಖ್ಯೆ:9427/2020). ಈ ಸಂಬಂಧವಾಗಿ ಉಚ್ಚ ನ್ಯಾಯಾಲಯವು ದಿನಾಂಕ: 02.09.2020ರಂದು ಮಧ್ಯಂತರ ಆದೇಶ ಹೊರಡಿಸಿ ಈ ಹಿಂದೆ ನಿಗದಿಪಡಿಸಿದ್ದ ಪಿಂಚಣಿ ಪಾವತಿಸಲು ಆದೇಶಿಸಿರುತ್ತಾರೆ. ಅದರಂತೆ ಸೆಪ್ಟಂಬರ್–2020ರ ಮಾಹೆಯಿಂದ ರೂ.69,925/–ಗಳನ್ನು ಪಾವತಿಸಲು ಕ್ರಮವಹಿಸಲಾಗಿರುತ್ತದೆ.

ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು WP.No.9427/2020 ಮತ್ತು ಇತರೆ ರಿಟ್ ಪ್ರಕರಣಗಳನ್ನು ಒಟ್ಟುಗೂಡಿಸಿಕೊಂಡು ದಿನಾಂಕ: 16.11.2021ರಂದು "when the Division Bench has considered the contentions raised by petitioners herein in those writ petitions and has

ಕುಲಪತಿಗಳು ಕುಲಸಚಿವರು

quashed the Government order bearing No.FD (Spl) 113 PEN 2012 BENGALORU dated 11.03.2020, the petitioners herein who are similarly placed would be entitled for the same relief Accordingly" all these writ petitions are allowed in terms of the order dated 21.06.2021 in W.P.No.102097/2021 ಎಂದು ಆದೇಶ ಹೊರಡಿಸಿರುತ್ತದೆ.

ಈ ಸಂಬಂಧವಾಗಿ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಸೇವೆಗಳು-2), ಬೆಂಗಳೂರು, ಇವರು ದಿನಾಂಕ: 30.08.2023ರಂದು ದಿನಾಂಕ: 01.04.2012ರ ನಂತರ ನಿವೃತ್ತಿ ಹೊಂದಿರುವ ಅಧ್ಯಾಪಕ ವರ್ಗದವರಿಗೆ ಪಿಂಚಣಿ/ಕುಟುಂಬ ಪಿಂಚಣಿಗೆ ಸಂಬಂಧಿಸಿದಂತೆ ದಿನಾಂಕ: 01.09.2023ರಿಂದ ಜಾರಿಗೆ ಬಂದಂತೆ ಹೊಸ ಆದೇಶ ಹೊರಡಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ: 01.04.2012ರ ನಂತರ ನಿವೃತ್ತಿ/ಮರಣ ಹೊಂದಿರುವ ಅಧ್ಯಾಪಕ ವರ್ಗದವರಿಗೆ ಪಿಂಚಣಿ/ಕುಟುಂಬ ಪಿಂಚಣಿಯನ್ನು ಸರ್ಕಾರದ ಆದೇಶದನ್ವಯ ಯಥಾವತ್ತಾಗಿ ಅಳವಡಿಸಿಕೊಳ್ಳುವ ಸಂಬಂಧ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 01.04.2012ರ ನಂತರ ನಿವೃತ್ತಿ/ಮರಣ ಹೊಂದಿರುವ ಅಧ್ಯಾಪಕ ವರ್ಗದವರಿಗೆ ಪಿಂಚಣಿ/ಕುಟುಂಬ ಪಿಂಚಣಿಯನ್ನು ಸರ್ಕಾರದ ಆದೇಶದನ್ವಯ ಯಥಾವತ್ತಾಗಿ ಅಳವಡಿಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**<u>ವಿಷಯ ಸಂಖ್ಯೆ: 176.08</u>**

**ವಿಷಯ: ಕರಾಮುವಿಯಲ್ಲಿ "ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ" ವನ್ನು ನೂತನವಾಗಿ ಆರಂಭಿಸಿ ಸ್ಥಾಪಿಸುವ ಕುರಿತು.**
**ಉಲ್ಲೇಖ: ಅಧ್ಯಾಪಕರು ಮತ್ತು ಅಧ್ಯಾಪಕೇತರ ನೌಕರರುಗಳ ಮನವಿ ಪತ್ರದ ದಿನಾಂಕ: 11-01-2024.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ನಾಡಪ್ರಭು ಕೇಂಪೇಗೌಡರ ಅಧ್ಯಯನ ಮತ್ತು ವಿಸ್ತರಣಾ ಕೆಂದ್ರವನ್ನು ಸ್ಥಾಪಿಸುವಂತೆ ಕೋರಿ ನಾಡಪ್ರಭು ಕೇಂಪೇಗೌಡರ ಸಾಧನೆ, ದೇಶಭಕ್ತಿ ಕುರಿತು ವಿದ್ಯಾರ್ಥಿಗಳು ಅಭ್ಯಸಿಸುವುದು ಮತ್ತು ಸಂಶೋಧನೆಗೆ ಅಗತ್ಯವಿದೆ ಹಾಗೂ ದೇಶಭಕ್ತರಾದ ಇವರನ್ನು ಯುವ ಪೀಳಿಗೆಗೆ ಆದರ್ಶವಾಗುತ್ತದೆ ಎಂದು ತಿಳಿಸಿ ವಿವಿಯ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರು ಮನವಿ ಸಲ್ಲಿಸಿರುತ್ತಾರೆ(ಮನವಿ ಪತ್ರ ಲಗತ್ತಿಸಿದೆ). ಸದರಿ ಅಧ್ಯಯನ ವಿಸ್ತರಣಾ ಕೇಂದ್ರದ ಸ್ಥಾಪನೆಗೆ ವಿಶ್ವವಿದ್ಯಾನಿಲಯವು ಆರ್ಥಿಕ ಸಹಾಯವನ್ನು ಮಾಡುವುದರ ಜೊತೆಗೆ ಸ್ಥಾಪನೆಗೆ ಶಾಸನಬದ್ಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸಿದರೆ ಸದರಿ ಕೇಂದ್ರಕ್ಕೆ ರಾಜ್ಯದ ಹಲವಾರು ಸಂಘ-ಸಂಸ್ಥೆಗಳು, ಘನ ರಾಜ್ಯ ಸರ್ಕಾರ ಮತ್ತು ರಾಷ್ಟ್ರ

**ಕುಲಪತಿಗಳು** **ಕುಲಸಚಿವರು**

ಹಾಗೂ ಅಂತರಾಷ್ಟ್ರೀಯ ಮಟ್ಟದ ಹಲವು ಸಂಸ್ಥೆಗಳ ಸಹಾಯ ಪಡೆಯುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ **ನಾಡಪ್ರಭು ಕೆಂಪೇಗೌಡರ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ಸ್ಥಾಪನೆ** ಮತ್ತು ಕೇಂದ್ರದ ಚಟುವಟಿಕೆಗೆ ಖಾಯಂ ಅಧ್ಯಾಪಕರನ್ನು ಸಂಯೋಜನಾಧಿಕಾರಿಯನ್ನಾಗಿ ನೇಮಿಸಿ ಕಾರ್ಯಾರಂಭ ಮಾಡಲು ವಿಷಯವನ್ನು ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಕೆಲವು ಪೀಠಗಳನ್ನು ಮಾಡಿ ಅವುಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಇರುವುದರಿಂದ ಅವುಗಳು ಹಾಗೆಯೇ ತಟಸ್ಥವಾಗಿದೆ. ಯಾವುದೇ ಪೀಠಗಳನ್ನು ಸ್ಥಾಪಿಸಿದರೆ ಅದಕ್ಕೆ ವಿಶ್ವವಿದ್ಯಾನಿಲಯದಿಂದ ಇಂತಿಷ್ಟು ಹಣವನ್ನು ಆ ಪೀಠದ ಹೆಸರಿನಲ್ಲಿ ಸ್ಥಿರ ಠೇವಣಿ ಇಟ್ಟು, ಅವುಗಳಿಂದ ಬರತಕ್ಕ ಬಡ್ಡಿ ಹಣದಲ್ಲಿ ಪೀಠಗಳ ಕಾರ್ಯಗಳನ್ನು ಮಾಡಬೇಕಾಗಿರುತ್ತದೆ ಹಾಗೂ ಸದರಿ ಪೀಠಕ್ಕೆ ಸಂಬಂಧಪಟ್ಟ ಹಲವು ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಣೆ ಮಾಡುತ್ತಿದ್ದರೆ ಅವುಗಳು ಕಾರ್ಯೋನ್ಮುಖವಾಗಿರುತ್ತದೆ. ಸದರಿ ಪೀಠಗಳ ಕಾರ್ಯಗಳಿಗೆ ಸಾರ್ವಜನಿಕರು ಮತ್ತು ಸಂಸ್ಥೆಗಳಿಂದ ದೇಣಿಗೆಯನ್ನು ಪಡೆದು ಹೆಚ್ಚು ಹೆಚ್ಚು ಕಾರ್ಯಗಳನ್ನು ನಡೆಸುತ್ತಿರಬೇಕೆಂದು ವಿವರಿಸಿದರು.

ಮುಂದುವರೆದಂತೆ, **ನಾಡಪ್ರಭು ಕೆಂಪೇಗೌಡರ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ಸ್ಥಾಪನೆ** ಮತ್ತು ಕೇಂದ್ರದ ಚಟುವಟಿಕೆಗೆ ರಾಜ್ಯದ ಹಲವಾರು ಸಂಘ–ಸಂಸ್ಥೆಗಳು, ಘನ ರಾಜ್ಯ ಸರ್ಕಾರ ಮತ್ತು ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಹಲವು ಸಂಸ್ಥೆಗಳ ಸಹಾಯ ಪಡೆಯುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಕ್ರಮವಹಿಸುವುದು ಸೂಕ್ತವೆಂದು ಸಭೆಗೆ ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯಲ್ಲಿ "ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ" ವನ್ನು ಪ್ರಾರಂಭಿಸಿ, ಇದರ ಮುಖಾಂತರ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಒಬ್ಬರು ಖಾಯಂ ಅಧ್ಯಾಪಕರನ್ನು ಸಂಯೋಜನಾಧಿಕಾರಿಯಾಗಿ ನೇಮಿಸಿ ಕಾರ್ಯೋನ್ಮುಖರಾಗಲು ಸಭೆಯು ಅನುಮೋದಿಸಿತು.**

#####

**ವಿಷಯ ಸಂಖ್ಯೆ: 176.09**

**ವಿಷಯ:** ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.

– * –

ದಿನಾಂಕ: 23–01–2024 ರಂದು ನಡೆದ 30ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ದಿನಾಂಕ: 30–01–2024 ರಂದು ನಡೆಯಲಿರುವ ವ್ಯವಸ್ಥಾಪನಾ ಮಂಡಳಿಯ 176ನೇ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*****

**ಕುಲಪತಿಗಳು** **ಕುಲಸಚಿವರು**

ಶೈಕ್ಷಣಿಕ ಮಂಡಳಿ ವಿಷಯಕ್ಕೆ ಮಂಡನೆಯಾಗಿದ್ದ ವಿಷಯಗಳನ್ನು ಡೀನ್(ಶೈಕ್ಷಣಿಕ) ರವರು ಸಭೆಗೆ ವಿವರಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 30ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸಿತು.**

#####

**ವಿಷಯ ಸಂಖ್ಯೆ: 176.10**

**ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಭಾಗಿತ್ವದಲ್ಲಿ ಶ್ರೀ. ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು.**

– * –

ಶ್ರೀಮತಿ ಸರೋಜಮ್ಮ ತುಳಿಸಿದಾಸ್, ಕಾರ್ಯದರ್ಶಿ, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ(ರಿ) ಇವರು ದಿನಾಂಕ: 11–01–2024 ರಂದು ಮನವಿ ಪತ್ರವನ್ನು ಸಲ್ಲಿಸಿ, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಸ್ಥಾಪನೆ ಮೂಲ ಉದ್ದೇಶವೇ ಮಹಾತ್ಮಗಾಂಧೀಜಿ ಅವರು ಕಂಡ ಕನಸು ನನಸು ಮಾಡುವುದು. ಮಹಾತ್ಮಗಾಂಧೀಜಿ ಅವರ "ಗ್ರಾಮ ಸ್ವರಾಜ್ಯ" ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲು ಸಂಸ್ಥೆಯು ಶ್ರಮಿಸುತ್ತಾ ಬಂದಿದೆ. ಮೂಲಭೂತ ಸೌಕರ್ಯದ ಕೊರತೆಯಿಂದ ಹಿಂದುಳಿದಿರುವ ಹಳ್ಳಿಗಳನ್ನು ದತ್ತು ಪಡೆದು, ಅಭಿವೃದ್ಧಿಪಡಿಸುವ ಯೋಜನೆಯನ್ನು ನಮ್ಮ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಹಾಕಿಕೊಂಡಿದೆ. ಇದಕ್ಕಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಮ್ಮ ಕಾರ್ಯಯೋಜನೆಗೆ ಸಹಕಾರ ನೀಡಬೇಕೆಂದು ಕೋರುತ್ತೇವೆ. ಈಗಾಗಲೇ ಮೈಸೂರು ಜಿಲ್ಲಾ ಪಂಚಾಯತ್ ವಿಚಾರ ಸಂಸ್ಥೆ ನೀಡಬೇಕೆಂದು ಕೋರುತ್ತೇವೆ. ಈಗಾಗಲೇ ಮೈಸೂರು ಜಿಲ್ಲಾ ಪಂಚಾಯತ್ ಹಾಕಿಕೊಂಡಿರುವ ಕಾರ್ಯಯೋಜನೆಯೊಂದಿಗೂ ನಮ್ಮ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಕೈಜೋಡಿಸಿ ದುಡಿಯುವ ನಿರ್ಧಾರ ಮಾಡಿದೆ. ಅದ್ದರಿಂದ ಮೈಸೂರು ಜಿಲ್ಲೆಯ ಯಾವುದಾದರು ಮೂಲಭೂತ ಸೌಕರ್ಯದಿಂದ ಹಿಂದುಳಿದ ಹಳ್ಳಿಯನ್ನು ದತ್ತು ಪಡೆದು ಅಭಿವೃದ್ಧಿಸುವ ಕಾರ್ಯಕ್ರಮಕ್ಕೆ "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ" ಸಹಭಾಗಿತ್ವ ನೀಡಿದರೆ "ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ" ಕೈ ಜೋಡಿಸಿ ಶ್ರಮಿಸಲು ಸಿದ್ದವಿದೆ. ಮಹಾತ್ಮ ಗಾಂಧೀಜಿ ಅವರು ಕಂಡ ಕನಸು ನನಸು ಮಾಡುವ, ಈ ಗ್ರಾಮೀಣಾಭಿವೃದ್ಧಿ ಯೋಜನೆಗೆ "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ" ಸಹಕಾರ ನೀಡಬೇಕೆಂದು ಕೋರಿರುತ್ತಾರೆ. (ಪ್ರತಿ ಲಗತ್ತಿಸಿದೆ) ಅದರಂತೆ, ಸದರಿ ಸಹಭಾಗಿತ್ವದಲ್ಲಿ ಗ್ರಾಮೀಣಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಬೇಕಿದೆ. UGC Regulation and NAAC ಮಾನ್ಯತೆಯಲ್ಲಿಯೂ ಇಂತಹ ಕಾರ್ಯಕ್ರಮಗಳನ್ನು ಆನುಷ್ಠಾನಗೊಳಿಸಲು ಸೂಚನೆ ಇರುತ್ತದೆ.

ಕುಲಪತಿಗಳು ಕುಲಸಚಿವರು

ಇದರಿಂದ NAAC ಮಾನ್ಯತೆಗೆ ಅಂಕಗಳು ಸಹ ನಿರ್ಧಾರವಾಗುತ್ತದೆ. ಆದುದರಿಂದ ಈ ಕಾರ್ಯಕ್ರಮಕ್ಕೆ ಅನುಮೋದನೆ ಕೋರುತ್ತಾ, ವಿಶ್ವವಿದ್ಯಾನಿಲಯದ ಖಾಯಂ ಅಧ್ಯಾಪಕರುಗಳಲ್ಲಿ ಒಬ್ಬರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ, ಸದರಿ ಸಂಸ್ಥೆಯ ಸಹಯೋಗದೊಂದಿಗೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲು ವಿಶ್ವವಿದ್ಯಾನಿಲಯದಿಂದ ಸಹಕಾರ ನೀಡಲು ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕೆ ವಿಷಯ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ, ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು, ಇದರ ಕಾರ್ಯದರ್ಶಿಯವರಾದ ಶ್ರೀಮತಿ. ಸರೋಜಮ್ಮ ತುಳಸೀದಾಸ್ ರವರು ಮಹಾತ್ಮ ಗಾಂಧೀಜಿಯವರು ಕಂಡ ಕನಸು ನನಸು ಮಾಡುವ, ಈ ಗ್ರಾಮೀಣಾಭಿವೃದ್ಧಿ ಯೋಜನೆಗೆ ನಮ್ಮ ವಿಶ್ವವಿದ್ಯಾನಿಲದಿಂದ ಸಹಕಾರ ಕೋರಿರುತ್ತಾರೆಂದು ಸಭೆಗೆ ವಿವರಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು ಇವರ ಸಹಭಾಗಿತ್ವದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಬೇಕಿದೆ. UGC Regulation and NAAC ಮಾನ್ಯತೆಯಲ್ಲಿಯೂ ಇಂತಹ ಕಾರ್ಯಕ್ರಮಗಳನ್ನುಆನುಷ್ಠಾನಗೊಳಿಸಲು ಸೂಚನೆ ಇರುವುದರಿಂದ NAAC ಮಾನ್ಯತೆಗೆ ಅಂಕಗಳು ಸಹ ನಿರ್ಧಾರವಾಗುವ ಹಿನ್ನಲೆಯಲ್ಲಿ, ಕರಾಮುವಿ ಹಾಗೂ ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು, ಇವರ ಸಹಭಾಗಿತ್ವದಲ್ಲಿ ಗ್ರಾಮೀಣಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲು ಸಭೆಯು ಅನುಮೋದಿಸಿತು.**

#####

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು:</u>

1. **ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭೆಗೆ ಇಬ್ಬರು ವ್ಯವಸ್ಥಾಪನಾ ಮಂಡಳಿ ಸದಸ್ಯರನ್ನು ನೇಮಿಸುವ ಕುರಿತು ಹಣಕಾಸು ಅಧಿಕಾರಿಗಳು ಮನವಿ ಬಗ್ಗೆ.**

– * –

ಸದರಿ ವಿಷಯದ ಬಗ್ಗೆ ಮಾನ್ಯ ಕುಲಸಚಿವರು ಮಾತನಾಡಿ, ಕರಾಮುವಿ ಕಾಯ್ದೆ - 1994ರಲ್ಲಿ ಹಣಕಾಸು ಸಮಿತಿ ಸಂಬಂಧ ವಿವರಗಳಲ್ಲಿ ಕರಾಮುವಿ ವ್ಯವಸ್ಥಾಪನಾ ಮಂಡಳಿಯ ಇಬ್ಬರು ಸದಸ್ಯರುಗಳಿರಬೇಕೆಂಬ ನಿಯಮವಿರುವುದರಿಂದ ಹಣಕಾಸು ಸಮಿತಿ ಸದಸ್ಯರನ್ನಾಗಿ ನೇಮಕ ಮಾಡುವ ಬಗ್ಗೆ ಪ್ರಸ್ತಾಪಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ಹಣಕಾಸು ಸಮಿತಿಗೆ ವ್ಯವಸ್ಥಾಪನಾ ಮಂಡಳಿಯ ಇಬ್ಬರು ಸದಸ್ಯರನ್ನು ನೇಮಕ ಮಾಡುವ ವಿಷಯವನ್ನು ಮಾನ್ಯ ಕುಲಪತಿಗಳ ವಿವೇಚನೆಗೆ ನೀಡಲಾಗಿದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಕುಲಪತಿಗಳು** **ಕುಲಸಚಿವರು**

2. ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿ ಬಗ್ಗೆ.

– * –

ಸದರಿ ವಿಷಯದ ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀ. ಹರೀಶ್ ಗೌಡರು ಮತ್ತು ಶ್ರೀ. ರವಿಶಂಕರ್ .ಡಿ ರವರು ಮಾತನಾಡಿ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ಕಳೆದ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆಯಾಗಿದ್ದು, ಇದುವರೆವಿಗೂ ಇದನ್ನು ನಿರ್ವಹಣೆ ಮಾಡದೇ ಇರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದರು.

ನಂತರ, ಕುಲಸಚಿವರು ಮಾತನಾಡಿ, ವಿಭಾಗದ ಹೆಚ್ಚಿನ ಕಾರ್ಯದೊತ್ತಡದಿಂದ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ಸಾಧ್ಯವಾಗಿರುವುದಿಲ್ಲ. ಈ ಹಿಂದಿನ ಸಾಲುಗಳಲ್ಲಿ ಇವುಗಳನ್ನು ನಿರ್ವಹಣೆ ಮಾಡದೆ ಇರುವುದರಿಂದ ತೊಂದರೆಯಾಗಿರುತ್ತದೆ. ಆದುದರಿಂದ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ಆದಷ್ಟು ಶೀಘ್ರವಾಗಿ ಮಾಡಲಾಗುವುದೆಂದು ಸಭೆಗೆ ತಿಳಿಸಿದರು.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯನ್ನು ಅತ್ಯಂತ ತುರ್ತು ಎಂದು ಪರಿಗಣಿಸಿ ಕೂಡಲೇ ಈ ಕಾರ್ಯವನ್ನು ಮಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

3. ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ನೌಕರರುಗಳಿಗೆ ಸರ್ಕಾರದ ನಿಯಮಾವಳಿ ಪ್ರಕಾರ ಪರೀಕ್ಷೆ ನಡೆಸುವ ಬಗ್ಗೆ.

– * –

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ, ಕರಾಮುವಿಯಲ್ಲಿ ಹೆಚ್ಚು ತಾತ್ಕಾಲಿಕ ಡಾಟಾ ಎಂಟ್ರಿ ಆಪರೇಟರ್‌ಗಳಿದ್ದು, ಅವರುಗಳಿಗೆ ಗಣಕಯಂತ್ರದಲ್ಲಿ ಪರಿಣಿತಿ ಹೊಂದಿರುವವರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ತಾತ್ಕಾಲಿಕ ನೌಕರರುಗಳಿಗೆ ಗಣಕಯಂತ್ರದಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆ, ಎರಡರಲ್ಲೂ ಸಹ 10 + 10 ನಿಮಿಷಗಳ ಟೆಸ್ಟ್‌ಗಳನ್ನು ನಡೆಸಿ ಅವರು ಪಡೆದಿರುವ ಅಂಕಗಳನ್ನು ನಮೂದು ಮಾಡಿ ಅವುಗಳನ್ನು ಮುಚ್ಚಿದ ಲಕೋಟೆಯಲ್ಲಿ ಮಾನ್ಯ ಕುಲಪತಿಗಳಿಗೆ ಸಲ್ಲಿಸತಕ್ಕದ್ದು ಹಾಗೂ ಸದರಿ ಲಕೋಟೆಯನ್ನು ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳನ್ನು ಒಳಗೊಂಡಂತೆ ರಚನೆಯಾಗುವ ಉಪಸಮಿತಿ ಸಭೆಗೆ ಮಂಡಿಸತಕ್ಕದ್ದು ಎಂದು ಸಭೆಗೆ ತಿಳಿಸಿದರು.

ಕುಲಪತಿಗಳು ಕುಲಸಚಿವರು

ನಂತರ, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳನ್ನೊಳಗೊಂಡಂತೆ ರಚನೆಯಾಗುವ ಉಪಸಮಿತಿಯು ಕೈಗೊಂಡ ತೀರ್ಮಾನ/ವಿವರಗಳನ್ವಯ ಅವುಗಳನ್ನು ಅನುಷ್ಠಾನಕ್ಕೆ ತರಬೇಕಾಗಿರುತ್ತದೆಂದು ವಿವರಿಸಿದರು.

*****

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಮಾನ್ಯ ಕುಲಪತಿಗಳು ವಿವರಿಸಿರುವ ರೀತ್ಯಾ ಕಾರ್ಯಗಳನ್ನು ಮಾಡಲು ಸಭೆಯು ಒಪ್ಪಿತು.**

#####

4. ವಿಷಯ: **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ತಾತ್ಕಾಲಿಕ ನೌಕರರುಗಳಿಗೆ ಆಯಾ ಹುದ್ದೆಗೆ ಅನುಗುಣವಾಗಿ ಇರುವ ಮೂಲವೇತನದಲ್ಲಿ ರೂ.10/- ಗಳನ್ನು ಕಡಿತಗೊಳಿಸಿ ವೇತನ ನೀಡುವ ಬಗ್ಗೆ.**

– * –

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ, ಕರಾಮುವಿಯಲ್ಲಿ ತಾತ್ಕಾಲಿಕ ನೌಕರರಾಗಿ 5(ಐದು) ವರ್ಷಗಳ ಕಾಲ ಸಮಪರ್ಕವಾಗಿ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ, ಸದರಿ ತಾತ್ಕಾಲಿಕ ನೌಕರರುಗಳಿಗೆ ಆಯಾ ಹುದ್ದೆಯ ಮೂಲ ವೇತನದಲ್ಲಿ ರೂ.10/-ಗಳನ್ನು ಕಡಿತಗೊಳಿಸಿ (ಇತರೆ ಭತ್ಯೆಗಳನ್ನು ಹೊರತುಪಡಿಸಿ) ವೇತನ ನೀಡುವ ಬಗ್ಗೆ ಒಂದು ಸಮಿತಿಯನ್ನು ರಚಿಸಿ, ಅವುಗಳಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಈ ಬಗ್ಗೆ ಕ್ರಮವಹಿಸುವುದು ಸೂಕ್ತವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

*****

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಮಾನ್ಯ ಕುಲಪತಿಗಳು ವಿವರಿಸಿರುವ ರೀತ್ಯಾ ನಿರ್ವಹಣೆ ಮಾಡಲು ಸಭೆಯು ಒಪ್ಪಿತು.**

#####

5. ವಿಷಯ: **ಕರಾಮುವಿಯ 19ನೇ ಘಟಿಕೋತ್ಸವ ಸಮಾರಂಭದಲ್ಲಿ ವಿ.ವಿ. ನಿಲಯದ ವತಿಯಿಂದ ಗೌರವ ಡಾಕ್ಟರೇಟ್ (Doctor of Literature - D. Litt.) ಪ್ರಶಸ್ತಿ ನೀಡುವ ಸಂಬಂಧ ಗಣ್ಯ ವ್ಯಕ್ತಿಗಳ ಹೆಸರುಗಳನ್ನು ಸೂಚಿಸುವುದರ ಕುರಿತು.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 19ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು 2024ರ ಮಾರ್ಚ್ ಮಾಹೆಯಲ್ಲಿ ನಡೆಸಲು ಉದ್ದೇಶಿಸಿದ್ದು, ಘಟಿಕೋತ್ಸವ ಮುಖ್ಯ ಭಾಷಣ ಮಾಡಲು ಗಣ್ಯ ವ್ಯಕ್ತಿಗಳ ಹೆಸರುಗಳನ್ನು ಆಯ್ಕೆ ಮಾಡಿ ಸೂಕ್ತವಾಗಿರುವ ಒಬ್ಬರಿಗೆ ಅನುಮೋದನೆ ಕೋರಿ ಈಗಾಗಲೇ ಪತ್ರ ರವಾನಿಸಲಾಗಿದೆ.

**ಕುಲಪತಿಗಳು** **ಕುಲಸಚಿವರು**

ಸದರಿ ಘಟಿಕೋತ್ಸವದಲ್ಲಿ ಮಾನವಿಕ, ಸಾಮಾಜಿಕ, ವಿಜ್ಞಾನ, ಔದ್ಯೋಗಿಕ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ/ಸೇವೆಗೈದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ (Doctor of Literature - D. Litt.) ಪ್ರಶಸ್ತಿ ನೀಡುವ ಸಲುವಾಗಿ ಪ್ರಶಸ್ತಿಗೆ ಅರ್ಹರಾಗುವ ಹೆಸರುಗಳನ್ನು ಸೂಚಿಸಲು ವಿಶೇಷ ಸಭೆಯನ್ನು ಕರೆಯಲಾಗಿದೆ. ಸಭೆಯಲ್ಲಿ ಆಯ್ಕೆ ಮಾಡಿದ ವ್ಯಕ್ತಿಗಳ ಹೆಸರುಗಳನ್ನು **'ಪರಿಶೀಲನಾ ಸಮಿತಿ"**ಯ ಮುಂದೆ ಮಂಡಿಸಬೇಕಾಗಿರುತ್ತದೆ. ಪರಿಶೀಲನಾ ಸಮಿತಿಗೆ ವಿಶ್ವವಿದ್ಯಾನಿಲಯದಿಂದ Prof. Dayanand Agsar, Vice-chancellor, Gulbarga University, Kalaburgi. ರವರ ಹೆಸರನ್ನು ಶಿಫಾರಸ್ಸು ಮಾಡಲಾಗಿರುತ್ತದೆ. ಸದರಿ ಪರಿಶೀಲನಾ ಸಮಿತಿಯು ಶಿಫಾರಸ್ಸು ಮಾಡುವ ಹೆಸರುಗಳನ್ನು ಅಂತಿಮಗೊಳಿಸಿ ಘನತೆವೆತ್ತ ಕುಲಾಧಿಪತಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ, ಮೇಲ್ಕಂಡ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

<u>ತೀರ್ಮಾನ:</u>

**ಸದರಿ ಸಮಿತಿಯ ಸದಸ್ಯರು 19ನೇ ವಾರ್ಷಿಕ ಘಟಿಕೋತ್ಸವದ ಮುಖ್ಯ ಭಾಷಣ ಮಾಡಲು ಗಣ್ಯರೊಬ್ಬರನ್ನು ಆಹ್ವಾನಿಸಲು ಮತ್ತು ಘಟಿಕೋತ್ಸವದಲ್ಲಿ ಮಾನವಿಕ, ಸಾಮಾಜಿಕ, ವಿಜ್ಞಾನ, ಔದ್ಯೋಗಿಕ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ/ಸೇವೆಗೈದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ (Doctor of Literature - D. Litt.) ಪ್ರಶಸ್ತಿ ನೀಡುವ ಸಲುವಾಗಿ ಪ್ರಶಸ್ತಿಗೆ ಅರ್ಹರಾಗುವ ಹೆಸರುಗಳನ್ನು ಸೂಚಿಸಲು "ಪರಿಶೀಲನಾ ಸಮಿತಿ"ಯ ಮುಂದೆ ಮಂಡಿಸಲು ಈಗಾಗಲೇ ಕರಾಮುವಿಯಿಂದ Prof. Dayanand Agsar, Vice-chancellor, Gulbarga University ರವರ ಹೆಸರನ್ನು ಶಿಫಾರಸ್ಸು ಮಾಡಿದ್ದು, ಸದರಿ ಸಮಿತಿಯು ಶಿಫಾರಸ್ಸು ಮಾಡುವ ಹೆಸರುಗಳನ್ನು ಅಂತಿಮಗೊಳಿಸಿ, ಘನತವೆತ್ತ ಕುಲಾಧಿಪತಿಗಳಿಗೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು.**

#####

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 176ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವುದಕ್ಕೆ ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಪತಿಗಳು** **ಕುಲಸಚಿವರು**